## ಐರನ್ ಡೆಫಿಷಿಯೆನ್ಸಿ!

ರಜೆಯಲ್ಲಿ ಊರಿಗೆ ಹೋಗಿದ್ದಾಗ ಹಳ್ಳಿ ಹುಡುಗನೊಬ್ಬ ಊರಿನ ಜಾತ್ರೆಗೆ ಸುಕ್ಕಾದ ಅಂಗಿ ಧರಿಸಿ ಬಂದಿರುವುದನ್ನು ಗಮನಿಸಿದೆ. ಜೊತೆಗಿದ್ದ ಮಗಳು ಪುಟ್ಟಿಗೆ, 'ನೋಡಲ್ಲಿ ಆ ಹುಡುಗನನ್ನು, ಬಟ್ಟೆಗೆ ಐರನ್ ಹಾಕಲೂ ಅವನ ಬಳಿ ಹಣವಿಲ್ಲ' ಎನ್ನುತ್ತಾ ಹಳ್ಳಿಯ ಸ್ಥಿತಿಗತಿಯ ಬಗ್ಗೆ ವಿವರಿಸಿದೆ.

ವಿಜ್ಞಾನ ತರಗತಿಯಲ್ಲಿ ಕಬ್ಬಿಣದ ಪೋಷಕಾಂಶ ಕಡಿಮೆ ಇದ್ದರೆ ದೇಹ ಬೇಗನೇ ಸುಕ್ಕುಗಟ್ಟುತ್ತದೆ ಎನ್ನುವುದನ್ನು ಕಲಿತಿದ್ದ ಪುಟ್ಟಿ ತಕ್ಷಣ ಉದ್ಗರಿಸಿದಳು, 'ಇಲ್ಲಪ್ಪಾ, ಆ ಹುಡುಗನಿಗೆ ಐರನ್ ಡೆಫಿಷಿಯೆನ್ಸಿ ಇದೆ. ಹೀಗಾಗಿ ಅವನ ದೇಹವೂ ಸುಕ್ಕಾಗಿದೆ. ಮೊದಲು ಅದನ್ನು ನೋಡಿ' ಎಂದಳು. ನಾನು ಮೂಕವಿಸ್ಮಿತನಾದೆ!

**ರಮಣ್ ಶೆಟ್ಟಿ ರೆಂಜಾಳ್**





ಕಲೆ: ಗಣೇಶ ಆಚಾರ್ಯ

## ಸಿಟ್ ಆಗಿ...

ಪುಟ್ಟ ಸೃಷ್ಟಿ ಓದುತ್ತಿರುವುದು ಹೆಸರಾಂತ ಕಾನ್ವೆಂಟ್ ಶಾಲೆಯಲ್ಲಿ. ಕೊರೊನಾದಿಂದ ಶಾಲೆಗಳು ಮುಚ್ಚಿದ ಕಾರಣ ಆನ್‌ಲೈನ್‌ನಲ್ಲಿ ಕನ್ನಡ ಪಾಠ ನಡೆಯುತ್ತಿತ್ತು. ಕನ್ನಡ ಪಾಠ ನಡೆಯುತ್ತಿರುವಾಗ ಕನ್ನಡದಲ್ಲೇ ಮಾತಾಡಬೇಕೆಂದು ಹೇಳಿದ್ದೆ. ಒಮ್ಮೆ ಪಾಠ ನಡೆಯುತ್ತಿದ್ದಾಗ ಮಧ್ಯದಲ್ಲೇ, 'ಸಿಟ್ ಆಗಿ ತುಂಬಾ ಹೊತ್ತಾಯ್ತು' ಎಂದು ಹೇಳಿದವಳೇ ಇಯರ್ ಫೋನ್ ತೆಗೆದಿಟ್ಟು ಒಂದು ಕ್ಷಣ ಮರೆಯಾದಳು. ಅವಳಿಗ್ಯಾಕೆ ಸಿಟ್ಟು ಬಂತು ಅಂತ ನಾನು ಯೋಚಿಸಿದೆ. ಸ್ವಲ್ಪ ಸಮಯದ ನಂತರ ಮತ್ತೆ ಬಂದು ತನ್ನ ಕುರ್ಚಿಯಲ್ಲಿ ಕುಳಿತಳು. ಆಗ ನನಗೆ ಹೊಳೆಯಿತು. ಸೃಷ್ಟಿಗೆ ಕನ್ನಡದ 'ಸಿಟ್ಟು' ಬಂದಿರಲಿಲ್ಲ. ತುಂಬಾ ಹೊತ್ತು ಕುಳಿತುಕೊಂಡಿದ್ದರಿಂದ ಆಕೆಗೆ ವಿರಾಮ ಬೇಕಿತ್ತು!

**ವಿದ್ಯಾ ವಿ. ಹಾಲಭಾವಿ**